## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**OS**– 122/2024 **ಪಿ ಡಬ್ಲ್ಯೂಃ –3**

**ದಿಃ** 06.01.2026 **ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂಬರ 5 ರವರ ಪರ ಶ್ರೀ ಜಿ ಎಸ ಜೆ ವಕೀಲರಿಂದಃ**

ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯಬೇಕೆಂದು ಬಸವರಾಜ ಚನ್ನೊಜಿ ಇವರು ನಿಮಗೆ ಹೇಳಿದರು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸುವ ಸಮಯದಲ್ಲಿ ಹಾಗೂ ಈಗಲೂ ಕೂಡಾ ನಾನು ಬಸವರಾಜ ಚನ್ನೂಜಿರವರ ಜೊತೆಯಲ್ಲಿಯೇ ಬಂದಿದ್ದೇನೆ ಎಂದರೆ ಸರಿ. ನಾನು ಬಸವರಾಜ ಚನ್ನೂಜಿರವರಿಗೆ ಸುಮಾರು 20–25 ವರ್ಷಗಳಿಂದ ಪರಿಚಯನಿದ್ದೇನೆ. ನನ್ನ ಆಸ್ತಿ ದಾವಾ ಆಸ್ತಿಯ ಹತ್ತಿರದಲ್ಲಿ ಇದೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ದಾಖಲೆ ಹಾಜರುಪಡಿಸಿಲ್ಲ ಆದರೆ ಅವರ ಹೊಲ ಮತ್ತು ನಮ್ಮ ಹೊಲ ಎದುರು–ಬದರು ಇರುತ್ತದೆ ಎನ್ನುತ್ತಾರೆ. ನಮ್ಮ ಹೊಲ ಹಾಗೂ ಅವರ ಹೊಲ ಎದುರು–ಬದರು ಇದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆಸ್ತಿಗಳಲ್ಲಿ ಯಾರು ಕಬ್ಜಾದಲ್ಲಿ ಇರುತ್ತಾರೊ ಅವರ ಹೆಸರು ಕಾಲಂ ನಂಬರ 9 ರ ಉತಾರಗಳಲ್ಲಿ ನಮೂದು ಇರುತ್ತದೆ ಎಂದರೆ ಸರಿ. ವಾದಿಯರು ದಾವಾ ಆಸ್ತಿಯ ಕಬ್ಜಾದಲ್ಲಿ ಇದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರಮಾಣ ಪತ್ರವನ್ನು ವಕೀಲರು ತಯಾರಿಸಿದ ಮೇಲೆ ನಾವು ಓದಿ ಸಹಿ ಮಾಡಿರುತ್ತೇವೆ. ನನಗೆ ಆಂಗ್ಲ ಭಾಷೆ ಓದಲು ಬರೆಯಲು ಬರುತ್ತದೆ. ಪ್ರತಿವಾದಿಯರು ನನಗೆ ಪರಿಚಯ ಎಂದು ಬರೆಸಿದ್ದು ಯಾವ ರೀತಿ ಪರಿಚಯ ಎಂದರೆ ಸಾಕ್ಷಿ ನನಗೆ ಪರಿಚಯ ಇಲ್ಲ ಎನ್ನುತ್ತಾರೆ. ಅಂದರೆ ನೀವು ಪ್ರಮಾಣ ಪತ್ರವನ್ನು ಓದಲಾರದೆ ಸಹಿ ಮಾಡಿದ್ದೀರಿ ಎಂದರೆ ಸಾಕ್ಷಿ ಓದಿದ್ದೇನೆ ಎನ್ನುತ್ತಾರೆ. ಬಕ್ಷೀಸ ಆದ ದಿನದಿಂದ ಪ್ರತಿವಾದಿಯರು ದಾವಾ ಆಸ್ತಿಯ ಕಬ್ಜಾದಲ್ಲಿ ಇರುತ್ತಾರೆ ಆದರೆ ನಾನು ವಾದಿಯರು ಇದ್ದಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸಾಕ್ಷಿ ಬಸವರಾಜ ಚನ್ನೊಜಿಯವರೆ

ಕಬ್ಜಾದಲ್ಲಿ ಇರುತ್ತಾರೆ ಎನ್ನುತ್ತಾರೆ. ಬಸವರಾಜ ಚನ್ನೂಜಿ ಇವರು ನನಗೆ ಪರಿಚಯ ಇರುವ ಕಾರಣ ಅವರಿಗೆ ಅನುಕೂಲವಾಗಲೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸಾಕ್ಷಿ ಸುಳ್ಳು ಎನ್ನುತ್ತಾರೆ. ಪ್ರತಿವಾದಿಯರು ಯಾವತ್ತು ದಾವಾ ಆಸ್ತಿಯ ಕಬ್ಜಾದಲ್ಲಿ ಇಲ್ಲಾ ಎಂದು ಸುಳ್ಳು ಬರೆಸಿದ್ದೇನೆಂದರೆ ಸಾಕ್ಷಿ ಬಸವರಾಜ ಚನ್ನೂಜಿಯವರೆ ಕಬ್ಜಾದಲ್ಲಿ ಇದ್ದು ಸಾಗುವಳಿ ಮಾಡಿಕೊಳ್ಳುತ್ತಾ ಇದ್ದಾರೆ ಎನ್ನುತ್ತಾರೆ. ಬಸವರಾಜ ಚನ್ನೂಜಿಯವರು ಕಬ್ಜಾದಲ್ಲಿ ಇದ್ದಾರೆಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ

**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**- 122/2024 **ಪಿ ಡಬ್ಲ್ಯೂಃ -2**

**ದಿಃ** 06.01.2026 **ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ನಂಬರ 5 ರವರ ಪರ ಶ್ರೀ ಜಿ ಎಸ ಜೆ ವಕೀಲರಿಂದಃ**

ನನ್ನ ವಿದ್ಯಾಬ್ಯಾಸ ಎಸ.ಎಸ.ಎಲ್.ಸಿ ಯವರೆಗೆ ಆಗಿರುತ್ತದೆ. ನನಗೆ ಆಂಗ್ಲ ಭಾಷೆ ಓದಲು ಬರುವುದಿಲ್ಲ ನೋಡಿಕೊಂಡು ಬರೆಯುತ್ತೇನೆ. ನ್ಯಾಯಾಲಯಕ್ಕೆ ಸಲ್ಲಿಸಿರುವ ಪ್ರಮಾಣ ಪತ್ರದ ಬಗ್ಗೆ ನನಗೆ ಸ್ವತಃ ಮಾಹಿತಿ ಇದೆ. ಸಾಕ್ಷಿ ಹೇಳಲು ಬನ್ನಿ ಎಂದು ನಿಮಗೆ ಯಾರು ಹೇಳಿದರು ಎಂದರೆ ಸಾಕ್ಷಿ ಬಸವರಾಜ ಚನ್ನೊಜಿ ಅಂದರೆ ವಾದಿಯ ಜಿಪಿಎದಾರರು ಹೇಳಿರುತ್ತಾರೆ ಎನ್ನುತ್ತಾರೆ. ಸದರಿ ಬಸವರಾಜ ಚನ್ನೊಜಿ ಇವರು ಸುಮಾರು ನನಗೆ 40-45 ವರ್ಷಗಳಿಂದ ಪರಿಚಯ ಇರುತ್ತಾರೆ. ನನ್ನ ಹಾಗೂ ಅವರ ಒಡನಾಟ ಚೆನ್ನಾಗಿದೆ ಎಂದರೆ ಸರಿ. ಏನೂ ಸಾಕ್ಷಿ ಹೇಳಬೇಕೆಂದು ಹೇಳಿದರು ಎಂದರೆ ಸಾಕ್ಷಿ ಅವರು ಜಮೀನು ಮಾಡುವ ಬಗ್ಗೆ ಹಾಗೂ ಅವರು ಈಗ 25 ವರ್ಷಗಳಿಂದ ಜಮಿನಿನ ಸಾಗುವಳಿ ಮಾಡುತ್ತಿರುವ ಬಗ್ಗೆ ಎನ್ನುತ್ತಾರೆ. ಯಾರ ವಿರುದ್ಧ ಕೇಸು ದಾಖಲಿಸಿರುತ್ತಾರೆಂದು ಹೇಳಿದರಾ ಎಂದರೆ ಸಾಕ್ಷಿ slum board ವಿರುದ್ಧ ಹಾಕಿರುತ್ತಾರೆಂದು ನುಡಿಯುತ್ತಾರೆ. ಸರ್ವೆ ನಂಬರ 30/1 ನಿಮ್ಮ ಆಸ್ತಿಯೆ ಎಂದರೆ ಸಾಕ್ಷಿ

ಹೌದು ಎನ್ನುತ್ತಾರೆ. ನಿಶಾನೆ ಪಿ 14 ನ್ನು ಸಾಕ್ಷಿಗೆ ತೋರಿಸಿ ಸದರಿ ದಾಖಲೆಯಲ್ಲಿ ಕಾಲಂ ನಂಬರ 9 ರಲ್ಲಿ ನನ್ನ ಹೆಸರು ಇದೆ ಎಂದರೆ ಸರಿ. ಯಾರು ಕಬ್ಜಾದಲ್ಲಿ ಇರುತ್ತಾರೊ ಅವರ ಹೆಸರು ಕಾಲಂ ನಂಬರ 9 ರಲ್ಲಿ ನಮೂದು ಇರುತ್ತದೆ ಎಂದರೆ ಸರಿ. ಅದೇ ರೀತಿ ಸರ್ವೆ ನಂಬರ 63/1 ಈ ಆಸ್ತಿಯನ್ನು slum board ರವರಿಗೆ ದಾನ ಕೊಟ್ಟಿದ್ದಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಿಶಾನೆ ಪಿ 3 ರ ಕಾಲಂ ನಂಬರ 9 ರಲ್ಲಿ ಯಾರು ಹೆಸರು ಇದೆ ಎಂದರೆ ಸಾಕ್ಷಿ ಪ್ರತಿವಾದಿ ನಂಬರ 1 ಮತ್ತು 5 ರವರ ಹೆಸರು ಇದೆ

ಎನ್ನುತ್ತಾರೆ. ವಾದಿಯರು ಪ್ರತಿವಾದಿಯರಿಗೆ  ದಾವಾ ಆಸ್ತಿಯ ಬಕ್ಷೀಸ ಕೊಟ್ಟು ಕಬ್ಜಾ ಕೊಟ್ಟ ನಂತರ



ಪ್ರತಿವಾದಿಯರ ಹೆಸರು ದಾಖಲಾಗಿದೆ ಎಂದರೆ ಸಾಕ್ಷಿ ಮೊದಲಿಗೆ ಹೌದು ಎಂದು ನುಡಿದು ನಂತರ ಕಬ್ಜಾ ಬಸವರಾಜ ಚನ್ನೊಜಿ ರವರ ಕಬ್ಜಾದಲ್ಲಿದೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಸಧ್ಯಕ್ಕೆ ಕಡಲೆ ಮತ್ತು ಗೋಧಿಯ ಬಿತ್ತನೆ ಮಾಡಿರುತ್ತಾರೆ ಎನ್ನುತ್ತಾರೆ ಮತ್ತು ಮೇವಿನ ಬಣವಿ ಇದೆ ಎನ್ನುತ್ತಾರೆ. ಈ ರೀತಿ ಕಬ್ಜಾದಲ್ಲಿ ಇದ್ದಾರೆ ಹಾಗೂ ಮೇವಿನ ಬಣವಿ ಇದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಏನಾದರೂ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ  ಹಾಜರುಪಡಿಸಿಲ್ಲ ಎನ್ನುತ್ತಾರೆ, ಆದರೆ ಪ್ರತಿದಿನ ನೋಡುತ್ತೇನೆ ಎಂದು ನುಡಿಯುತ್ತಾರೆ. ವಾದಿಯರು ದಾವಾ ಆಸ್ತಿಯ ಕಬ್ಜಾದಲ್ಲಿ ಇಲ್ಲಾ ಆದರು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವಾದಿಯರು ನನಗೆ ಬಹಳ ದಿನದಿಂದ ಪರಿಚಯ ಇರುವ ಕಾರಣ ಅವರಿಗೆ ಅನುಕೂಲವಾಗಲೆಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿಯರು ಯಾವತ್ತು ಕಬ್ಜಾದಲ್ಲಿ ಇಲ್ಲಾ ವಾದಿಯರೆ ಇದ್ದಾರೆಂದು ಬರೆಸಿರುವುದು ಕೂಡಾ ಸುಳ್ಳು ಇದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ